ಫ್ರೀಡಂ ನ್ಯೂಸ್

# ಬೆಂಗಳೂರಿಗೆ ತಟ್ಟಿದ ಇರಾನ್ ಯುದ್ಧದ ಬಿಸಿ!

# ಹೋಟೆಲ್ ಉದ್ಯಮಕ್ಕೆ ಅತಿದೊಡ್ಡ ಗಂಡಾಂತರ!

**ಬೆಂಗಳೂರು:** ಸಿಲಿಕಾನ್ ಸಿಟಿಯ ಹೋಟೆಲ್ ಉದ್ಯಮಕ್ಕೆ ಈಗ ಇರಾನ್-ಇಸ್ರೇಲ್ ಸಂಘರ್ಷದ ನೇರ ಹೊಡೆತ ಬಿದ್ದಿದೆ. ಇಂದಿನಿಂದ (ಮಾರ್ಚ್ 10) ನಗರದಲ್ಲಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆ ದಿಢೀರ್ ಸ್ಥಗಿತಗೊಂಡಿದ್ದು, ಹೋಟೆಲ್ ಮಾಲೀಕರು ದಿಕ್ಕುತೋಚದಂತಾಗಿದ್ದಾರೆ. ಕಳೆದ ಶನಿವಾರವಷ್ಟೇ ಗೃಹಬಳಕೆ ಮತ್ತು ವಾಣಿಜ್ಯ ಸಿಲಿಂಡರ್ ಬೆಲೆಗಳು ಏರಿಕೆಯಾಗಿದ್ದವು. ಆದರೆ ಈಗ ಬೆಲೆ ಏರಿಕೆಗಿಂತಲೂ ಮಿಗಿಲಾಗಿ ಪೂರೈಕೆಯೇ ನಿಂತಿರುವುದು ಇಡೀ ಉದ್ಯಮವನ್ನು ಆತಂಕಕ್ಕೆ ತಳ್ಳಿದೆ.



ಇದು ಬಂದ್ ಅಲ್ಲ, ನಮ್ಮ ಅಸಹಾಯಕತೆ! ಸಂಕಷ್ಟದಲ್ಲಿ ಹೋಟೆಲ್ ಮಾಲೀಕರ ಸಂಘ!

ಈ ಕುರಿತು ತುರ್ತು ಎಚ್ಚರಿಕೆ ನೀಡಿರುವ ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ. ರಾವ್, "ಇದು ಹೋಟೆಲ್ ಬಂದ್ ಅಲ್ಲ, ಬದಲಿಗೆ ನಮ್ಮ ಅಸಹಾಯಕತೆ" ಎಂದು ಮಾರ್ಮಿಕವಾಗಿ ಹೇಳಿದ್ದಾರೆ. ಹೋಟೆಲ್‌ಗಳು ಅಗತ್ಯ ಸೇವೆಗಳ ಅಡಿಯಲ್ಲಿ ಬರುವುದರಿಂದ ಯಾವುದೇ ಕಾರಣಕ್ಕೂ ಮುಚ್ಚುವ ಪ್ರಶ್ನೆಯೇ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಆದರೆ, ಸಿಲಿಂಡರ್ ದಾಸ್ತಾನು ಇರುವವರೆಗೆ ಮಾತ್ರ ಸೇವೆ ನೀಡಲು ಸಾಧ್ಯ ಎಂದು ತಿಳಿಸಿರುವ ಅವರು, ಕೇಂದ್ರ ಸರ್ಕಾರ ಮತ್ತು ಸಂಸದರು ಕೂಡಲೇ ಈ ಬಿಕ್ಕಟ್ಟನ್ನು ಬಗೆಹರಿಸಬೇಕೆಂದು ಬಲವಾಗಿ ಒತ್ತಾಯಿಸಿದ್ದಾರೆ.



ಆಹಾರಕ್ಕಾಗಿ ಪರದಾಡಲಿದ್ದಾರೆಯೇ ಬೆಂಗಳೂರಿಗರು? ಆತಂಕ ಬೇಡ ಎಂದ ಕೇಂದ್ರ ಸಚಿವರು!

ಗ್ಯಾಸ್ ಕೊರತೆಯಿಂದಾಗಿ ಹೋಟೆಲ್‌ಗಳನ್ನೇ ನೆಚ್ಚಿಕೊಂಡಿರುವ ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಮತ್ತು ವೃತ್ತಿಪರರಿಗೆ ಊಟದ ಸಮಸ್ಯೆ ಎದುರಾಗುವ ಭೀತಿ ಮೂಡಿದೆ. ಈ ಮಧ್ಯೆ, ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ದೇಶದಲ್ಲಿ ಇಂಧನದ ಕೊರತೆ ಇಲ್ಲ ಎಂದು ಜನರಿಗೆ ಧೈರ್ಯ ತುಂಬಿದ್ದಾರೆ. ತೈಲ ಕಂಪನಿಗಳು 70 ದಿನಗಳವರೆಗೆ ಪೂರೈಕೆಯಲ್ಲಿ ವ್ಯತ್ಯಯವಾಗುವುದಿಲ್ಲ ಎಂದು ಭರವಸೆ ನೀಡಿದ್ದರೂ, ವಾಸ್ತವದಲ್ಲಿ ಪೂರೈಕೆ ಸ್ಥಗಿತಗೊಂಡಿರುವುದು ಹೋಟೆಲ್ ಮಾಲೀಕರಲ್ಲಿ ತಳಮಳ ಸೃಷ್ಟಿಸಿದೆ.












ಎಲ್. ಎಂ. ನಾಗರಾಜು
ಪ್ರಧಾನ ಸಂಪಾದಕರು

ಸಂಪಾದಕೀಯ

# ಸಿಎಂ ಕಚೇರಿಗೆ RSS... ಮೋದಿ ಮನೆಗೆ ಓವೈಸಿ..ಪತ್ರಕರ್ತರ ಮನೆಗೆ CM ಹೋಗ್ಲಿ ಬಿಡ್ರಿ..!






ಓದುಗರೇ ನಮಸ್ಕಾರ. ಸಿಎಂ ಸಚಿವಾಲಯದ ಅಧಿಕಾರಿಗಳ ಮೂಲಕ RSS ತನ್ನ ಬೇಳೆ ಬೇಯಿಸಿಕೊಳ್ತಿದೆ ಎಂಬ ಟೀಕೆ ಚಾಲ್ತಿಯಲ್ಲಿದೆ. ಇದು ನಿಜವೋ ಸುಳ್ಳೋ ಬೇರೆ ಮಾತು. ಆದರೆ ಕಾಂಗ್ರೆಸ್ ಸರ್ಕಾರದ ಮೇಲೆ ಆರ್ ಎಸ್ ಎಸ್ ಪ್ರಭಾವ ಬೀರಬಾರದಾ.? ಯಾರಷ್ಟೇ ಪ್ರಭಾವ ಬೀರಬೇಕು ಅನ್ನೋದು ಪ್ರಶ್ನೆ.

ನನಗನಿಸುತ್ತೆ ಕಾಂಗ್ರೆಸ್ ನ ಸಿಎಂ ಕಚೇರಿ ಮೇಲೆ RSS ಪ್ರಭಾವ ಇರಬೇಕು. ಅಷ್ಟೇ ಅಲ್ಲ ಬಿಎಸ್ಪಿ, ಕಮ್ಯುನಿಸ್ಟ್ ಪ್ರಭಾವವೂ ಕೆಲಸ ಮಾಡಬೇಕು. ಬಿಜೆಪಿಯ ಸಿಎಂ ಕಚೇರಿ ಮೇಲೆ DSS, ಸೇವಾದಳದ ಪ್ರಭಾವವೂ ಇರಬೇಕು. ಅದು ಪ್ರಜಾತಂತ್ರದ ಜೀವಂತಿಕೆಯ ಲಕ್ಷಣ.

ಸರ್ಕಾರದಲ್ಲಿ ಆರ್ ಎಸ್ ಎಸ್ ಮಾತು ನಡೆಯುತ್ತೆ ಎಂದಾದರೆ ಸಿದ್ದು ಟೀಮ್ ನ ಹೃದಯ ವೈಶಾಲ್ಯ ಮೆಚ್ಚುವಂತದ್ದು. ಆದರೆ ಉಳಿದ ಐಡಿಯಾಲಜಿ ಗಳ ಜನರನ್ನು ಸಮನಾಗಿ ಕಾಣುವುದು ಕೂಡ ಅವರ ಕರ್ತವ್ಯ. ಕೆಲ ಧ್ವನಿಗಳ ಉಪೇಕ್ಷೆಯೇ ಸದ್ಯದ ಟೀಕೆಗೆ ಕಾರಣವಾಗಿರುವ ಸಾಧ್ಯತೆಯಿದೆ.

ಯಾರೋ ಒಬ್ಬರು ಜೀ ಏನೋ ಒಂದು ಕೆಲಸ ಹೇಳಿ ಮಾಡಿಸಿಕೊಂಡಿರಬಹುದು, ಆದರೆ ಸಿದ್ದು ಟೀಮ್ ಗೆ ಇನ್ಫ್ಲುಯೆನ್ಸರ್ ಆಗಿ ಹೊಟ್ಟೆ ಹೊರೆಯುವ ತುರ್ತು ಆರ್ ಎಸ್ ಎಸ್ ಗೆ ಇದೆ ಎಂದು ಅನಿಸುತ್ತಿಲ್ಲ.

ಎಲೆಕ್ಷನ್ ವೇಳೆ ಎಲ್ಲ ಪಕ್ಷಗಳು ತಮ್ಮ ಐಡಿಯಾಲಜಿ ಜನರ ಮುಂದಿಡುತ್ತವೆ. ತಮಗಿಷ್ಟ ಬಂದವರನ್ನು ಜನ ಗೆಲ್ಲಿಸುತ್ತಾರೆ. ಗೆದ್ದನಂತರ ತಮಗೆ ಮತ ಹಾಕಿದ ಹಾಕದ ಎಲ್ಲರಿಗೂ ಅದು ಸರ್ಕಾರವೇ. ಬ್ಯೂರೋಕ್ರಸಿಯ ನಿಯಮಗಳಲ್ಲಿ ತಾರತಮ್ಯಕ್ಕೆ ಅವಕಾಶ ಇಲ್ಲ. ಒಂದು ಪೊಲಿಟಿಕಲ್ ಐಡಿಯಾಲಜಿಯನ್ನು ಜನರ ಮುಂದಿಟ್ಟು ಅಧಿಕಾರ ಹಿಡಿದಾಕ್ಷಣ ಮತ್ತೊಂದು ಐಡಿಯಾಲಜಿ ಜನರನ್ನು ವೈರಿಗಳಂತೆ ಕಾಣುವ, ಪರಿಭಾವಿಸುವ ಪರಿಯೇ ಅನಾರೋಗ್ಯದ ಸಂಕೇತ. ಇದನ್ನು ಪ್ರಿಯಾಂಕ್, ಹರಿಪ್ರಸಾದ್ ರ ಪಡೆಗಳು, ಸುರೇಶ್ ಕುಮಾರ್ , ಹರೀಶ್ ಪೂಂಜ ಪಟಾಲಂ ಗಳಿಗೆ ಅರ್ಥವಾಗಬೇಕು. ತಂತಮ್ಮ ಹೈಕಮಾಂಡ್ ಮೆಚ್ಚಿಸಲು ಇವ್ರಾಡೋ ಮಾತಿಂದ ಜನಕ್ಕೆ ತೂತುಕಾಸಿನ ಪ್ರಯೋಜನವೂ ಇಲ್ಲ.

ಯಾವುದೇ ಸರ್ಕಾರವಿರಲಿ ಒಂದು ಐಡಿಯಾಲಜಿಯ ಜನರನ್ನೇ ಓಲೈಕೆ ಮಾಡದೆ, ಎಲ್ಲಾ ಧ್ವನಿಗಳನ್ನು ಸಮಾನವಾಗಿ ಕೇಳುವುದು ಅಗತ್ಯ. ಸದ್ಯಕ್ಕೆ ನಡೆಯುತ್ತಿರುವ ರಾಯಲ್ ಸಲ್ಯೂಟ್ ವಿವಾದ, ಆರ್ ಎಸ್ ಎಸ್ ಇನ್ಫ್ಲುಯೆನ್ಸರ್ ವಾದ, ಪತ್ರಕರ್ತರ ಮನೆಗಳಿಗೆ ಮುಖ್ಯಮಂತ್ರಿ ಭೇಟಿ ವಿವಾದಗಳೆಲ್ಲವೂ ಸಿಎಂ ಕಚೇರಿ ಅಧಿಕಾರದ ಹಬ್ಬದ ಮಧ್ಯೆಯೂ ಲಿಬರಲ್ ಆಗಿ ಸಕ್ರಿಯವಾಗಿದೆ ಎಂಬುದರ ಸೂಚಕ. ಎಲ್ಲರನ್ನು ಆಲಿಸಿ, ಅರ್ಹರನ್ನು ಸ್ವೀಕರಿಸಿ, ಯಾರನ್ನೂ ವೃಥಾ ನೋಯಿಸದೆ ಜನರ ಹಿತಕ್ಕಾಗಿ ಕೆಲಸ ಮಾಡುವುದು ನಿಜವಾದ ಡೆಮಾಕ್ರಸಿ.ಸಿಎಂ ಕಚೇರಿಗೆ RSS... ಮೋದಿ ಮನೆಗೆ ಓವೈಸಿ..ಪತ್ರಕರ್ತರ ಮನೆಗೆ CM ಹೋಗ್ಲಿ ಬಿಡ್ರಿ..!

# ಸರ್ಕಾರಿ ಶಾಲೆಗೆ ಬಾರದ ಮಕ್ಕಳು:
# ಶೇ. 11.20 ರಷ್ಟು ದಾಖಲಾತಿ ಕುಸಿತ!



**ಬೆಂಗಳೂರು:** ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಸಮವಸ್ತ್ರ, ಶೂ ಮತ್ತು ಬಿಸಿ ಊಟದಂತಹ ಆಕರ್ಷಕ ಸೌಲಭ್ಯಗಳಿದ್ದರೂ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗುತ್ತಿರುವುದು ಆತಂಕ ಮೂಡಿಸಿದೆ. ಸೋಮವಾರ ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯ ನಿರಾಣಿ ಹನುಮಂತ್ ರುದ್ರಪ್ಪ ಅವರ ಪ್ರಶ್ನೆಗೆ ಉತ್ತರಿಸಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಕಳೆದ ಮೂರು ವರ್ಷಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳ ದಾಖಲಾತಿಯಲ್ಲಿ ಶೇಕಡಾ 11.20 ರಷ್ಟು ಭಾರಿ ಕುಸಿತವಾಗಿದೆ ಎಂಬ ಶಾಕಿಂಗ್ ಅಂಕಿ-ಅಂಶ ಬಿಚ್ಚಿಟ್ಟಿದ್ದಾರೆ. ಪೋಷಕರಲ್ಲಿ ಹೆಚ್ಚುತ್ತಿರುವ ಇಂಗ್ಲಿಷ್ ಮಾಧ್ಯಮದ ವ್ಯಾಮೋಹ ಹಾಗೂ ಖಾಸಗಿ ಶಾಲೆಗಳ ಹಾವಳಿಯೇ ಈ ಸ್ಥಿತಿಗೆ ಮುಖ್ಯ ಕಾರಣ ಎಂದು ಸಚಿವರು ಬೇಸರ ವ್ಯಕ್ತಪಡಿಸಿದ್ದಾರೆ.


**ಶಿಕ್ಷಕರಿಲ್ಲದ ಶಾಲೆ ಪೂಜಾರಿಯಿಲ್ಲದ ದೇವಸ್ಥಾನದಂತೆ! ಶೀಘ್ರವೇ 15,000 ಶಿಕ್ಷಕರ ನೇಮಕಕ್ಕೆ ಮುಹೂರ್ತ!**

ಸದನದಲ್ಲಿ ಶಿಕ್ಷಕರ ಕೊರತೆಯ ಕುರಿತು ವಾಗ್ದಾಳಿ ನಡೆಸಿದ ವಿರೋಧ ಪಕ್ಷದ ಸದಸ್ಯರಿಗೆ ಉತ್ತರಿಸಿದ ಸಚಿವರು, "ಶಿಕ್ಷಕರಿಲ್ಲದ ಶಾಲೆಗಳು ಪೂಜಾರಿಯಿಲ್ಲದ ದೇವಸ್ಥಾನಗಳಿದ್ದಂತೆ" ಎಂದು ಮಾರ್ಮಿಕವಾಗಿ ನುಡಿದರು. ಈ ಸಮಸ್ಯೆಯನ್ನು ನೀಗಿಸಲು ರಾಜ್ಯ ಸರ್ಕಾರ ಶೀಘ್ರದಲ್ಲೇ 15,000 ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಿದೆ ಎಂದು ಭರವಸೆ ನೀಡಿದ್ದಾರೆ. ಅಲ್ಲದೆ, ಸರ್ಕಾರಿ ಶಾಲಾ ಶಿಕ್ಷಕರಿಗೆ ಇಂಗ್ಲಿಷ್ ಬೋಧನಾ ಸಾಮರ್ಥ್ಯ ಹೆಚ್ಚಿಸಲು ವಿಶೇಷ ತರಬೇತಿ ನೀಡಲು ಬಜೆಟ್‌ನಲ್ಲಿ ಪ್ರತ್ಯೇಕ ಅನುದಾನ ಮೀಸಲಿಟ್ಟಿರುವುದಾಗಿ ತಿಳಿಸಿದ್ದಾರೆ. ಯಾವುದೇ ಕಾರಣಕ್ಕೂ ಸರ್ಕಾರಿ ಶಾಲೆಗಳನ್ನು ಮುಚ್ಚುವ ಪ್ರಶ್ನೆಯೇ ಇಲ್ಲ ಎಂದು ಅವರು ಇದೇ ವೇಳೆ ಸ್ಪಷ್ಟಪಡಿಸಿದರು.

**ಮೂಲಸೌಕರ್ಯದ ಕೊರತೆ ಹಾಗೂ ಅಲ್ಪ ಅನುದಾನ: ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಆಗ್ರಹ!**

ಚರ್ಚೆಯಲ್ಲಿ ಪಾಲ್ಗೊಂಡ ಶಿಕ್ಷಕ ಪ್ರತಿನಿಧಿ ವಿ.ಎನ್. ರಾಜಶೇಖರ್, ಶಾಲೆಗಳ ನಿರ್ವಹಣೆಗೆ ನೀಡುತ್ತಿರುವ ಅಲ್ಪ ಮೊತ್ತದ ಅನುದಾನವು ಸ್ವಚ್ಛತೆಗೂ ಸಾಕಾಗುತ್ತಿಲ್ಲ ಎಂಬ ವಾಸ್ತವವನ್ನು ಸದನದ ಮುಂದಿಟ್ಟರು. ಮತ್ತೊಂದೆಡೆ, ಖಾಸಗಿ ಶಾಲೆಗಳಲ್ಲಿರುವಂತೆ ಶಿಕ್ಷಕ-ವಿದ್ಯಾರ್ಥಿ ಅನುಪಾತವನ್ನು ಸರಿಪಡಿಸದಿದ್ದರೆ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಿಲ್ಲ ಎಂದು ಬಿಜೆಪಿ ಎಂಎಲ್‌ಸಿ ವಿವೇಕಾನಂದ ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಈಗಾಗಲೇ 1 ರಿಂದ 5ನೇ ತರಗತಿಯವರೆಗೆ ದ್ವಿಭಾಷಾ ಮಾಧ್ಯಮ ಆರಂಭಿಸಲಾಗಿದೆ ಮತ್ತು ಆಯ್ದ ಶಾಲೆಗಳನ್ನು 'ಕೆಪಿಎಸ್' ಮಾದರಿಯಲ್ಲಿ ಮೇಲ್ದರ್ಜೆಗೇರಿಸಿ ಮೂಲಸೌಕರ್ಯ ವೃದ್ಧಿಸಲಾಗುವುದು ಎಂದು ತಿಳಿಸಿದ್ದಾರೆ.

# ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಅಧ್ಯಾಯ ವಿವಾದ: ಎನ್‌ಸಿಇಆರ್‌ಟಿಯಿಂದ ಇಡೀ ಪುಸ್ತಕವೇ ವಾಪಸ್!




**ನವದೆಹಲಿ:** ಎನ್‌ಸಿಇಆರ್‌ಟಿ ಪ್ರಕಟಿಸಿದ್ದ 8ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕ ಈಗ ದೇಶಾದ್ಯಂತ ದೊಡ್ಡ ಸಂಚಲನ ಸೃಷ್ಟಿಸಿದೆ. ನ್ಯಾಯಾಂಗ ವ್ಯವಸ್ಥೆಯಲ್ಲಿನ ಸವಾಲುಗಳು ಮತ್ತು ಭ್ರಷ್ಟಾಚಾರದ ಕುರಿತು ವಿವಾದಿತ ಅಧ್ಯಾಯವನ್ನು ಸೇರಿಸಿದ್ದಕ್ಕಾಗಿ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ನ್ಯಾಯಾಂಗದ ಘನತೆಗೆ ಧಕ್ಕೆ ತರುವಂತಹ ವಿಷಯಗಳನ್ನು ಮಕ್ಕಳಿಗೆ ಕಲಿಸುವುದು ಸರಿಯಲ್ಲ ಎಂದು ಕಿಡಿಕಾರಿದ್ದ ನ್ಯಾಯಾಲಯದ ಆದೇಶದ ಬೆನ್ನಲ್ಲೇ, ಎನ್‌ಸಿಇಆರ್‌ಟಿ ಕ್ಷಮೆಯಾಚಿಸಿದ್ದು ವಿವಾದಿತ ಅಧ್ಯಾಯವಲ್ಲದೆ ಇಡೀ ಪುಸ್ತಕವನ್ನೇ ಹಿಂಪಡೆಯುವ ಅನಿವಾರ್ಯತೆಗೆ ಸಿಲುಕಿದೆ.

**ಸುಪ್ರೀಂ ಕೋರ್ಟ್ ಗರಂ: ಪಠ್ಯಪುಸ್ತಕದ ಡಿಜಿಟಲ್ ಆವೃತ್ತಿಗಳಿಗೂ ಬಿತ್ತು ಬ್ರೇಕ್!**

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ತ್ರಿಸದಸ್ಯ ಪೀಠವು ಈ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಫೆಬ್ರವರಿ 26ರಂದೇ ಈ ಪಠ್ಯಪುಸ್ತಕವನ್ನು ಸಂಪೂರ್ಣವಾಗಿ ನಿಷೇಧಿಸಿರುವ ಸುಪ್ರೀಂ ಕೋರ್ಟ್, ಮಾರುಕಟ್ಟೆಯಲ್ಲಿರುವ ಎಲ್ಲಾ ಪ್ರತಿಗಳನ್ನು ವಶಪಡಿಸಿಕೊಳ್ಳಲು ಮತ್ತು ಡಿಜಿಟಲ್ ಆವೃತ್ತಿಗಳನ್ನು ತಕ್ಷಣವೇ ತೆಗೆದುಹಾಕಲು ಕಟ್ಟುನಿಟ್ಟಿನ ಸೂಚನೆ ನೀಡಿದೆ. "ಇದು ನ್ಯಾಯಾಂಗದ ಪಾವಿತ್ರ್ಯತೆಯನ್ನು ಹಾಳುಮಾಡುವ ಪ್ರಯತ್ನ" ಎಂದು ಅಭಿಪ್ರಾಯಪಟ್ಟಿರುವ ನ್ಯಾಯಾಲಯ, ಈ ಆದೇಶ ಉಲ್ಲಂಘಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ ನೀಡಿದೆ.

## ಪಂಚ ರಾಜ್ಯಗಳ ಚುನಾವಣೆಗೆ ದಿನಾಂಕ ಫಿಕ್ಸ್: ಮಾ.3ನೇ ವಾರದಲ್ಲಿ ಅಧಿಕೃತ ಘೋಷಣೆ!




**ನವದೆಹಲಿ:** ದೇಶದ ರಾಜಕೀಯ ವಲಯದಲ್ಲಿ ಈಗ ಭಾರಿ ಸಂಚಲನ ಸೃಷ್ಟಿಯಾಗಿದೆ. ಬಹುನಿರೀಕ್ಷಿತ ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಗೆ ದಿನಾಂಕಗಳು ಬಹುತೇಕ ಅಂತಿಮಗೊಂಡಿವೆ. ಕೇಂದ್ರ ಚುನಾವಣಾ ಆಯೋಗದ ಮೂಲಗಳ ಪ್ರಕಾರ, ಮಾರ್ಚ್ ಮೂರನೇ ವಾರದಲ್ಲಿ ಚುನಾವಣಾ ವೇಳಾಪಟ್ಟಿ ಅಧಿಕೃತವಾಗಿ ಘೋಷಣೆಯಾಗುವ ಸಾಧ್ಯತೆಯಿದೆ. ಈಗಾಗಲೇ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ಪೂರ್ಣಗೊಳಿಸಿರುವ ಆಯೋಗ, ದೇಶದ ಅತಿದೊಡ್ಡ ಪ್ರಜಾಪ್ರಭುತ್ವ ಹಬ್ಬಕ್ಕೆ ಸರ್ವ ಸಿದ್ಧತೆ ಮಾಡಿಕೊಂಡಿದೆ.

**ಪಶ್ಚಿಮ ಬಂಗಾಳದಲ್ಲಿ 3 ಹಂತದ ಫೈಟ್: ಕೇರಳದಲ್ಲಿ ಒಂದೇ ಹಂತದ ಮತದಾನ ಸಾಧ್ಯತೆ!**
ಚುನಾವಣಾ ಕಾರ್ಯತಂತ್ರದ ಭಾಗವಾಗಿ ಪಶ್ಚಿಮ ಬಂಗಾಳದಲ್ಲಿ ಮೂರು ಹಂತಗಳಲ್ಲಿ ಮತದಾನ ನಡೆಸಲು ಆಯೋಗ ಚಿಂತನೆ ನಡೆಸಿದೆ. ಆದರೆ ಕೇರಳದಲ್ಲಿ ಕೇವಲ ಒಂದೇ ಹಂತದಲ್ಲಿ ಚುನಾವಣೆ ಮುಗಿಸಲು ಸಿದ್ಧತೆ ನಡೆದಿದೆ ಎನ್ನಲಾಗಿದೆ.

**ತಮಿಳುನಾಡಿನಲ್ಲಿ ಡಿಎಂಕೆ ಹೋರಾಟ: ಪ್ರತಿಷ್ಠೆಯ ಕಣವಾದ ವಿಧಾನಸಭಾ ಚುನಾವಣೆ!**
ದಕ್ಷಿಣ ಭಾರತದ ಪ್ರಮುಖ ರಾಜ್ಯವಾದ ತಮಿಳುನಾಡಿನಲ್ಲಿ ಅಧಿಕಾರವನ್ನು ಉಳಿಸಿಕೊಳ್ಳಲು ಡಿಎಂಕೆ ಪಕ್ಷವು ಶತಾಯಗತಾಯ ಪ್ರಯತ್ನ ನಡೆಸುತ್ತಿದೆ. ಈ ಚುನಾವಣೆಗಳು ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಭವಿಷ್ಯದ ದಿಕ್ಸೂಚಿಯಾಗಲಿವೆ. ಆಯಾ ರಾಜ್ಯಗಳ ಪ್ರಾದೇಶಿಕ ಪಕ್ಷಗಳು ಕೂಡ ಅಸ್ತಿತ್ವದ ಹೋರಾಟಕ್ಕೆ ಇಳಿದಿದ್ದು, ಮಾರ್ಚ್ ತಿಂಗಳಾಂತ್ಯಕ್ಕೆ ಇಡೀ ದೇಶದ ಗಮನ ಈ ರಾಜ್ಯಗಳತ್ತ ನೆಟ್ಟಿರಲಿದೆ.

# ಬೆಂಗಳೂರು ಟ್ರಾಫಿಕ್‌ಗೆ ಮುಕ್ತಿ ನೀಡಲು ಮಾಸ್ಟರ್ ಪ್ಲಾನ್



## 510 ಕೋಟಿ ರೂ. ಮೌಲ್ಯದ ಭೂಮಿ ವಶ!




**ಬೆಂಗಳೂರು:** ಸಿಲಿಕಾನ್ ಸಿಟಿಯ ರಸ್ತೆ ಸಂಚಾರ ದಟ್ಟಣೆಗೆ ಮುಕ್ತಿ ನೀಡಲು ಬೆಂಗಳೂರು ಪೂರ್ವ ನಗರ ನಿಗಮ (BECC) ಭಾರಿ ದೊಡ್ಡ ಕ್ರಮ ಕೈಗೊಂಡಿದೆ. ನಗರದ ಪ್ರಮುಖ ಮತ್ತು ಉಪ-ಆರ್ಟೀರಿಯಲ್ ರಸ್ತೆಗಳ ಅಗಲೀಕರಣಕ್ಕಾಗಿ ಬರೋಬ್ಬರಿ 510 ಕೋಟಿ ರೂಪಾಯಿ ಮೌಲ್ಯದ 14 ಎಕರೆ ಭೂಮಿಯನ್ನು ನಿಗಮವು ಯಶಸ್ವಿಯಾಗಿ ಸ್ವಾಧೀನಪಡಿಸಿಕೊಂಡಿದೆ. ಐಟಿಪಿಎಲ್ ಮುಖ್ಯ ರಸ್ತೆ, ವೈಟ್‌ಫೀಲ್ಡ್ ಮುಖ್ಯ ರಸ್ತೆ ಹಾಗೂ ದೊಡ್ಡನೆಕ್ಕುಂಡಿಯಂತಹ ಪ್ರಮುಖ ಭಾಗಗಳಲ್ಲಿ ಈ ಭೂಸ್ವಾಧೀನ ಪ್ರಕ್ರಿಯೆ ನಡೆದಿದ್ದು, ಸಂಚಾರ ಸುಗಮಗೊಳಿಸಲು ಸಿದ್ಧತೆ ಆರಂಭವಾಗಿದೆ.
ಐಟಿ ಹಬ್‌ನಲ್ಲಿ ರಸ್ತೆ ವಿಸ್ತರಣೆ ಪರ್ವ: ಅತಿಕ್ರಮಣ ತಡೆಯಲು ಬಿಇಸಿಸಿ ಕಟ್ಟುನಿಟ್ಟಿನ ಕ್ರಮ!
ಒಟ್ಟು 52 ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದಿರುವ ಬಗ್ಗೆ ಮಾಹಿತಿ ನೀಡಿರುವ ಬಿಇಸಿಸಿ ಆಯುಕ್ತ ಡಿ.ಎಸ್. ರಮೇಶ್, ಹೊರ ವರ್ತುಲ ರಸ್ತೆ ಮತ್ತು ಪೆರಿಫೆರಲ್ ರಿಂಗ್ ರಸ್ತೆಯನ್ನು ಸಂಪರ್ಕಿಸುವ ಪ್ರಸ್ತಾವಿತ ರಸ್ತೆಗಳಿಗಾಗಿ ಈ ಭೂಮಿಯನ್ನು ಕಾಯ್ದಿರಿಸಲಾಗಿದೆ ಎಂದು ತಿಳಿಸಿದ್ದಾರೆ. ವಶಪಡಿಸಿಕೊಂಡ ಭೂಮಿಯಲ್ಲಿ ಅತಿಕ್ರಮಣವಾಗದಂತೆ ತಡೆಯಲು ತಕ್ಷಣವೇ ನಿಗಮದ ಮಾಲೀಕತ್ವದ ಫಲಕಗಳನ್ನು ಅಳವಡಿಸಲಾಗುತ್ತಿದೆ. 2015ರ ಪರಿಷ್ಕೃತ ಮಾಸ್ಟರ್ ಪ್ಲಾನ್ ಅಡಿಯಲ್ಲಿ ಭವಿಷ್ಯದ ಸಂಚಾರದ ಅವಶ್ಯಕತೆಗಳನ್ನು ಪೂರೈಸಲು ಈ ಬೃಹತ್ ಕಾರ್ಯಾಚರಣೆ ನಡೆಸಲಾಗಿದೆ.
ಕೇವಲ ರಸ್ತೆ ಅಗಲೀಕರಣವಲ್ಲ, ಸೈಕಲ್ ಪಾಥ್ ಹಾಗೂ ಪಾದಚಾರಿ ಮಾರ್ಗಗಳೂ ನಿರ್ಮಾಣ!
ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಕೇವಲ ರಸ್ತೆ ಅಗಲೀಕರಣಕ್ಕೆ ಮಾತ್ರವಲ್ಲದೆ, ಪಾದಚಾರಿ ಮಾರ್ಗಗಳ ಅಭಿವೃದ್ಧಿ ಮತ್ತು ಸೈಕಲ್ ಪಾಥ್‌ಗಳ ನಿರ್ಮಾಣಕ್ಕೂ ಬಳಸಿಕೊಳ್ಳಲು ಯೋಜನೆ ರೂಪಿಸಲಾಗಿದೆ. ಈ ಮೂಲಸೌಕರ್ಯ ಅಭಿವೃದ್ಧಿಯಿಂದಾಗಿ ಭವಿಷ್ಯದಲ್ಲಿ ಸಂಚಾರ ದಟ್ಟಣೆ ಗಣನೀಯವಾಗಿ ಕಡಿಮೆಯಾಗಲಿದ್ದು, ಸಾರ್ವಜನಿಕರಿಗೆ ಉತ್ತಮ ರಸ್ತೆ ವ್ಯವಸ್ಥೆ ಸಿಗಲಿದೆ. ಸರ್ಕಾರದ ಮಾರ್ಗಸೂಚಿ ಮೌಲ್ಯದಂತೆ ಕೋಟ್ಯಂತರ ರೂಪಾಯಿ ಬೆಲೆಬಾಳುವ ಈ ಭೂಮಿ ಈಗ ಅಧಿಕೃತವಾಗಿ ನಗರ ಪಾಲಿಕೆಯ ತೆಕ್ಕೆಗೆ ಸೇರಿದೆ.